# KANNADA SAHITYA DARSHANADALLI HOSAGANNADADA SAHITYA

**Lohit .P**
Lecturer,
Department of kannada,
Akshara Institute of Management Studies,
Shivamogga , Karnataka (state),
India.

ಆಧುನಿಕ ಎಂದರೆ ಸ್ಥೂಲವಾಗಿ ಹೊಸತು ಎಂದರ್ಥ. ಅಂದರೆ ಹಳೆಯದನ್ನು ಬಿಟ್ಟು ಹೊಸ ಸೃಷ್ಟಿಗೆ ಕೈಹಾಕುವುದಂತಲ್ಲ. ನಿನ್ನೆಯ ಸೂರ್ಯನೇ ಇಂದು ನೂತನ ಕಾಂತಿಯಿಂದ ಹೊರ ಹೊಮ್ಮುವಂತೆ ಅಂದಿನ ಸಾಹಿತ್ಯ ಸೃಷ್ಟಿಶಕ್ತಿಯೇ ನೂತನ ಕಾಂತಿಯಿಂದ ಕಾಣಿಸಿಕೊಳ್ಳುವುದು ಎಂದರ್ಥ.

ಅಭಿವೃದ್ಧಿಯನ್ನು ಹೊಂದುತ್ತಾ ಬಂದ ಕನ್ನಡ ಸಾಹಿತ್ಯವು ಈ ಆಧುನಿಕ ಯುಗದಲ್ಲಿ ಅನೇಕ ನವ್ಯ ಪ್ರಯೋಗಗಳ ಭವ್ಯಕಾಣಿಕೆಗಳಿಂದ ಶ್ರೇಷ್ಠತೆಯನ್ನು ಹೊಂದಿತು. ಈ ಕಾಲವು ಎಲ್ಲಾ ವಿಧದಲ್ಲಿಯೂ ವೈವಿಧ್ಯತೆಯನ್ನು ಹೊಂದಿದೆ. ಈ ಯುಗವು ಸಾಹಿತ್ಯದಲ್ಲಿ ಒಂದು ಪರ್ವಕಾಲವಾಯಿತು. ಕನ್ನಡ ಸಾಹಿತ್ಯದ ರೀತಿ ನೀತಿಗಳು ಹೊಸ ಮಾರ್ಗವನ್ನನುಸರಿಸಿ ಯಾವ ಯುಗದಲ್ಲಿಯೂ ನಡೆಯದ ಅಭಿವೃದ್ಧಿ ಕಾರ್ಯವು ಈ ಕಾಲದಲ್ಲಿ ನಡೆಯಿತು. ಬರುವ ಅಂತಕಗಳನ್ನು ಕನ್ನಡವು ಜಯಿಸಿ ಮುಂದಕ್ಕಡಿಯಿಡಬೇಕಾಯಿತು. ಮೈಸೂರು ಅರಸರು ಈ ಕಾಲದಲ್ಲಿ ಕನ್ನಡಕ್ಕೆ ಬಹಳ ಪ್ರೋತ್ಸಾಹಕೊಟ್ಟರು. ಆದರೆ ಪರಾಧೀನತೆಯಿಂದ ಭಾಷೆಗೂ ಸ್ವಲ್ಪಮಟ್ಟಿಗೆ ಧಕ್ಕೆಯೊದಗಿತು. ವಿ????ನದ ಅಭಿವೃದ್ಧಿಯ ಈ ಯುಗದಲ್ಲಿ ಭಾಷೆಗಳ ತಿಕ್ಕಾಟವು ಪ್ರಾರಂಭವಾದರೂ ಭಾಷಾಘನತೆ ಕಡಮೆಯಾಗಲಿಲ್ಲ.

ಹಳತಿಲ್ಲದ ಹೊಸತೆಂಬುದು ಬರಿಯ ಭ್ರಾಂತಿ. ಆದ್ದರಿಂದ ಸ್ಥೂಲವಾಗಿ ಹಳೆಯದರ ಮರುಹುಟ್ಟೇ ನವೋದಯದ ಗುಟ್ಟು ಎನ್ನಬಹುದು. ಒಟ್ಟಿನಲ್ಲಿ ಕನ್ನಡ ಸಾಹಿತ್ಯ ಜೀವಪೂರ್ಣವಾದುದು. ಮೇಲಿಂದ ಮೇಲೆ ನವೋದಯಗಳಾಗುತ್ತಾ ನಡೆದು ಬರುತ್ತಿದೆ. ಹನ್ನೆರಡನೇ ಶತಮಾನದಲ್ಲಿ ಧರ್ಮಯುಗ ಪ್ರಾರಂಭವಾದಾಗ ವಚನಗಳ ರೂಪತಾಳಿ ಸಾಮಾನ್ಯ ಜನರಲ್ಲಿಗೂ ಮುಟ್ಟಿತು. ಹರಿಹರ ರಾಘವಾಂಕರ ಕಾಲದಲ್ಲಿ ಚಂಪೂವಿನಿಂದ ಇಳಿದು ರಗಳೆ, ಷಟ್ಪದಿಗಳ ರೂಪ ತಾಳಿತು. ಮುಂದೆ ಪುರಂದರದಾಸಾದಿ ಹರಿಭಕ್ತರು ಕೀರ್ತನೆಗಳ ಮೂಲಕ ಸಿಂಗರಿಸಿದರು. ಹಾಗೆಯೇ ಸಾಹಿತ್ಯವು 'ರೀತಿ' ಯಲ್ಲಿ ವ್ಯತ್ಯಸವಾದಂತೆ 'ವಸ್ತು' ವಿನಲ್ಲಿಯೂ ವ್ಯತ್ಯಾಸ ಹೊಂದುತ್ತಾ ಸಾಗಿತ್ತು. ಅಂದು ರಾಜಾಸ್ತಾನದಲ್ಲಿನ ಕವಿಗಳು ರಾಜನನ್ನು ಅಜರ್ುನನೊಡನೆಯೋ, ಭೀಮ ನೊಡನೆಯೋ ಅಭೇದವನ್ನು ಕಲ್ಪಿಸಿ ಬರೆದಂತಹ ಕಾವ್ಯಗಳಿವೆ. ರಾಜನು ಶೃಂಗಾರ ಪ್ರಿಯನಾದಾಗ ಅದಕ್ಕೆ ತಕ್ಕಂತಹ ನಾಟಕಗಳು ಬಂದಿವೆ. ಭಕ್ತಿ ಪ್ರಧಾನವಾದಂತಹ ಕಾವ್ಯಗಳೂ ಹುಟ್ಟಿವೆ. ಹಾಗೆಯೇ ಇಪ್ಪತ್ತನೆಯ ಶತಮಾನದ ವೇಳೆಗೆ ಕನ್ನಡ ಸಾಹಿತ್ಯದಲ್ಲಿ ನೂತನ ಯುಗವೊಂದು ಪಾಶ್ಚಾತ್ಯ ವಿದ್ಯಾಭ್ಯಾಸದ ಫಲವಾಗಿ ಕಾಲಿಟ್ಟಿತು. ಹಾಗಾಗಿ ಆಧುನಿಕತೆ ಎಂದರೆ ಹಿಂದಿನ ಪರಂಪತೆಯನ್ನು ಬಿಟ್ಟು ಮುಂದೆ ಹೋಗುವಂತಹದ್ದಲ್ಲ. ಆಧುನಿಕತೆಯ ಪರಂಪರೆ ಹೊಸ ಸಾಮಾಜಿಕ ಸಾಂಸ್ಕೃತಿಕ ನೆಲೆಗಳನ್ನು ಅರ್ಥರ್ೈಸುತ್ತಾ ಮುಂದುವರಿಸುವ ಕೆಲಸವನ್ನು ಮಾಡುತ್ತದೆ. ಒಟ್ಟಿನಲ್ಲಿ ಹಳೆಯ ಸಾಹಿತ್ಯದಲ್ಲಿರುವ ಸತ್ವದೊಡನೆ ಪಾಶ್ಚಾತ್ಯ ವಿದ್ಯಾಭ್ಯಾಸದಿಂದ ಬಂದಂತಹ ನೂತನ ಭಾವನೆ ಗಳನ್ನು ಅಳವಡಿಸಿಕೊಂಡುದೇ 'ಆಧುನಿಕ ಸಾಹಿತ್ಯ' ಎಂದು ಹೇಳಬಹುದು.

ಆಧುನಿಕ ಕನ್ನಡ ಸಾಹಿತ್ಯದ ಆರಂಭದ ದೆಸೆಯಲ್ಲಿ ಪಾಶ್ಚಾತ್ಯ ವಿದ್ವಾಂಸರಿಂದ ಕನ್ನಡಕ್ಕೆ ದೊರೆತ ಪ್ರೇರಣೆ, ಪ್ರಯೋಜನಗಳು ಚಿರಸ್ಮರಣೀಯವಾದುದು. ಪಾಶ್ಚಾತ್ಯರು ಕರ್ನಟಕದ ಜನಜೀವನದಲ್ಲಿ ಬೆರೆತು ಇಲ್ಲಿನ ಸಾಹಿತ್ಯ, ಸಂಸ್ಕೃತಿಯನ್ನು ಆಳವಾಗಿ ಅಧ್ಯಯನ ಮಾಡಿ ಹಲವು ಪ್ರಾಚೀನ ಗ್ರಂಥಗಳನ್ನೂ ಸಂಪಾದಿಸಿ ಪ್ರಕಟಿಸಿದರು. ವ್ಯಾಕರಣ, ಛಂದಸ್ಸು, ನಿಘಂಟು ಮೊದಲಾದ ಗ್ರಂಥಗಳ ರಚನೆಗೆ ಕೈಹಾಕಿದರು. ಇಂತಹವರುಗಳಲ್ಲಿ ಜಾನ್ ಹ್ಯಾಂಕ್, ವಿಲಿಯಂರೀವ್, ಕಿಟ್ಟಲ್, ಬಿ.ಎಲ್. ರೈಸ್ ಮೊದಲಾದವರ ಕೊಡುಗೆ ಅಪಾರವಾದುದಾಗಿದೆ. ಈ ವಿಚಾರದಲ್ಲಿ ಕನ್ನಡ ಶಾಸನಗಳನ್ನು ಕಲೆಹಾಕಿದ ಕೀತರ್ಿ 'ಪ್ಲೀಟ್' ಅವರದಾದರೆ, ಮೊಟ್ಟಮೊದಲ ಕನ್ನಡ ಸಾಹಿತ್ಯ ಚರಿತ್ರೆ ಬರೆದ ಕೀತರ್ಿ, ಇ.ಪಿ. ರೈಸ್ ರವರಿಗೆ ಸಲ್ಲುತ್ತದೆ. ಹಾಗೆಯೇ ಮೈಸೂರು ಗೆಜೆಟಿಯರ್ ನ ಎರಡು ಸಂಪುಟಗಳನ್ನು ಎಪಿಗ್ರಾಫಿಯ ಕನರ್ಾಟಕದ ಹನ್ನೆರಡು ಸಂಪುಟಗಳನ್ನು ಹೊರತಂದ ಕೀತರ್ಿ ಬಿ.ಎಲ್. ರೈಸ್ ರವರಾದರೆ ದ್ರಾವಿಡ ಭಾಷೆಗಳ

ತುಲನಾತ್ಮಕ ವ್ಯಾಕರಣ ನೀಡಿದ 'ಕಾಲ್ಡ್ ವೆಲ್' ರು ಹಲವು ದೃಷ್ಟಿಯಿಂದ ಚಿರಸ್ಮರಣೀಯರೆನಿಸುತ್ತಾರೆ.

1857 ರ ಸ್ವಾತಂತ್ರ್ಯ ಹೋರಾಟದ ನಂತರ ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಮುಗಿದು ಭಾರತ ನೇರವಾಗಿ ಇಂಗ್ಲೇಡಿನ ಆಡಳಿತಕ್ಕೆ ಬಂದ ಮೇಲೆ ದೇಶದಲ್ಲಿ ಒಂದು ರೀತಿ ಶಾಂತಿ ನೆಲೆಸಿತು. ಎಷ್ಟೋ ಶತಮಾನಗಳ ನಂತರ ಭಾರತ ಯುದ್ಧ ದಿಂದ ಮುಕ್ತವಾಗಿತ್ತು. ಅಂದಿನ ಕನರ್ಾಟಕದ ಅರ್ಧಭಾಗವಾದ ಮೈಸೂರು ಸಂಸ್ಥಾನಕ್ಕೆ 1799 ರಲ್ಲಿಯೇ ಮುಮ್ಮಡಿ ಕೃಷ್ಣರಾಜ ಒಡೆಯರು ಮಹಾರಾಜರಾಗಿದ್ದರು. 1831 ರಿಂದ ಇಂಗ್ಲೀಷ್ ಅಧಿಕಾರಿಗಳೇ ಆಡಳಿತದ ಸೂತ್ರವನ್ನು ಹಿಡಿದಿದ್ದ ರಿಂದ ದೇಶದಲ್ಲೆಲ್ಲ ಇಂಗ್ಲೀಷ್ ವಿದ್ಯಾಭ್ಯಾಸ ಕ್ರಮ ಪ್ರಾರಂಭವಾಯಿತು. ಪರಿಣಾಮ ಹೊಸ ವಿಷಯಗಳ ಅಧ್ಯಯನಕ್ಕೆ ನಾಂದಿಹಾಡಿತು. ಸ್ವಾತಂತ್ರ್ಯ ಪ್ರೇಮ, ಪ್ರಜಾಪ್ರಭುತ್ವದಲ್ಲಿ ಶ್ರದ್ಧೆ ಇವುಗಳು ಜನಮನದಲ್ಲಿ ಬೇರೂರಿದವು.1857 ಕ್ಕೂ ಮೊದಲೇ 'ರಾಜಾರಾಂ ಮೋಹನ್ ರಾಯ್' ರಂತವರು ಪಾಶ್ಚಾತ್ಯ ವಿಧ್ಯಾಭ್ಯಾಸದಿಂದ ಪ್ರಭಾವಿತರಾಗಿದ್ದರು. 1783 ರಲ್ಲಿ 'ಚಾಲರ್ಸ ವಿಲ್ಕಿನ್ಸ್' ಎನ್ನುವಾತ ಭಗವದ್ಗೀತೆಯನ್ನು ಅನುವಾದ ಮಾಡಿದ. ಅಂದಿನಿಂದಲೇ ಹಲವಾರು ಪಾಶ್ಚಾತ್ಯ ವಿದ್ವಾಂಸರಿಗೆ ಭಾರತದ ಚಿಂತನ ಸಾಹಿತ್ಯದಲ್ಲಿ ಸೃಜನ ಸಾಹಿತ್ಯದಲ್ಲಿ ಶ್ರದ್ಧೆ, ಗೌರವಗಳು ಮೂಡತೊಡಗಿದವು. ಹಾಗೆಯೇ ಭಾರತದ ತತ್ವಶಾಸ್ತ್ರ ಗ್ರಂಥಗಳು, 'ಶಾಕುಂತಳ' ದಂತಹ ಕೃತಿಗಳು ದೂರದ ಜರ್ಮನಿಯಲ್ಲಿ ಮೆಚ್ಚುಗೆ ಪಡೆದವು. 1852 ರಿಂದ 56 ರವರೆಗೆ 'ಮ್ಯಾಕ್ಸ್ ಮುಲ್ಲರ್' ವೇದಗಳನ್ನು ಕುರಿತು ಮೂರು ಗ್ರಂಥಗಳನ್ನು ಪ್ರಕಟಿಸಿದನು. ಅಷ್ಟೆಲ್ಲಾ ಪ್ರಗತಿಯ ಜೊತೆಗೆ ದೇಶದಲ್ಲಿ ಅಚ್ಚುಕೂಟಗಳು, ವೃತ್ತಪತ್ರಿಕೆಗಳು ಪ್ರಾರಂಭವಾದವು. ಹಾಗಾಗಿ ಜನ ಸಾಮಾನ್ಯರಲ್ಲಿ ಓದುವ ಹವ್ಯಾಸ ಮೂಡತೊಡಗಿತು. ಭಾರತೀಯ ಭಾಷೆಗಳಲ್ಲಿ ವೃತ್ತಪತ್ರಿಕೆ ನಡೆಸಲು ಮೊದಲು ಮುಂದಾದವರು ರಾಜಾ ರಾಮ್ ಮೋಹನ್ ರಾಯ್ ರವರು. ಇವರು ಬಂಗಾಳಿಯಲ್ಲಿ ಕನ್ನಡದ ಮೊದಲ ವೃತ್ತಪತ್ರಿಕೆ 'ಮಂಗಳೂರು ಸಮಾಚಾರ್' ಪತ್ರಿಕೆಯನ್ನು 1843 ರಲ್ಲಿ ಮಂಗಳೂರಿನಲ್ಲಿ ಪ್ರಾರಂಭಿಸಿದರು. ಈ ಎಲ್ಲಾ ಬದಲಾವಣೆಗಳ ಮೂಲಕ ಇಡೀ ಭಾರತದಲ್ಲಿ ಹತ್ತೊಂಬತ್ತನೆಯ ಶತಮಾನದ ಕಡೆಯ, ಇಪ್ಪತ್ತನೆಯ ಶತಮಾನದ ಮೊದಲ ಎರಡು ದಶಕಗಳು ಮಹತ್ವದ ಬದಲಾವಣೆಗಳಿಗೆ ನಾಂದಿಯಾಡಿದವು. ಹಾಗಾಗಿ ಕನ್ನಡ ಸಾಹಿತ್ಯದಲ್ಲಿ ಹೊಸಯುಗದ ಹೆಬ್ಬಾಗಿಲು ತೆರೆಯಿತು.

**-: ಹೊಸಗನ್ನಡ ಸಾಹಿತ್ಯದ ಘಟ್ಟಗಳು :-**

ಹೊಸಗನ್ನಡ ಸಾಹಿತ್ಯದ ಮೊದಲ ಹಂತ 1870 ರಿಂದ 1920 ರವರೆಗೆ ಎನ್ನಬಹುದು. ಏಕೆಂದರೆ ಈ ಕಾಲಘಟ್ಟದಲ್ಲಿ ಮಹತ್ತರವಾದಂತಹ ಬದಲಾವಣೆಗಳು ರೂಪುಗೊಂಡವು. ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಕೊನೆಗೊಂಡ ನಂತರ ಹೊಸ ವಿಚಾರಗಳು ಹರಿಯತೊಡಗಿದವು. ಕನ್ನಡನಾಡಿಗೆ ಬಂದಂತಹ ಕ್ರೈಸ್ತ ಮಿಷನರಿಗಳು ತಮ್ಮ ಮತ ಧರ್ಮವನ್ನು ನಮ್ಮ ದೇಶದಲ್ಲಿ ಪ್ರಚಾರ ಮಾಡಲು, ಪ್ರಭಾವ ಬೀರಲು, ನಮ್ಮ ಜನರ ಆಚಾರ ವಿಚಾರಗಳನ್ನು ಅರಿತುಕೊಳ್ಳಲು ಕನ್ನಡ ಪಂಡಿತರ ಸಹಾಯದಿಂದ ಕನ್ನಡ ಕಲಿತು ಕನ್ನಡ ಭಾಷೆಗೆ ಚಿರಸ್ಮರಣೀಯವಾದಂತಹ ಸೇವೆ ಸಲ್ಲಿಸಿದ್ದಾರೆ. ಈ ಹಂತದಲ್ಲಿ ಕನ್ನಡ ಸಾಹಿತ್ಯದ ಒಂದು ವಿಶಿಷ್ಟ ರೂಪವಾಗಿ ಸಣ್ಣಕಥೆ ಅರಳಿತು. ನವೋದಯದ ಪೂರ್ವ ಅಥವಾ ನವೋದಯದ ಪ್ರಥಮ ಘಟ್ಟದಲ್ಲಿಯೇ ಸಣ್ಣಕಥೆ, ಕಾದಂಬರಿಗಳು ಕನ್ನಡದಲ್ಲಿ ಮೊಳಕೆ ಇಟ್ಟವು. ಪಾಶ್ಚಾತ್ಯರಲ್ಲಿ ಸಣ್ಣಕಥೆ ವಿಶಿಷ್ಟ ತೂಪವಾಗಿ ಅರಳೀದರೂ ಪ್ರಾಯಶಃ ಕನ್ನಡದಲ್ಲಿ ಮೊದಲು ಸಣ್ಣಕಥೆಗಳನ್ನು ಬರೆದವರೆಂದರೆ ಪಂಜೆ ಮಂಗೇಶರಾಯರು. ಮಾಸ್ತಿಯವರ ಸಣ್ಣಕಥೆಗಳು 1918-19 ರ ಹೊತ್ತಿಗೆ ಪ್ರಕಟವಾದದೆಂದು ತೋರುತ್ತದೆ. ಈ ಕಾಲದಲ್ಲಿಯೇ ಬಂಗಾಳಿಯ ಮೂಲಕ ಕಾದಂಬರಿ ಕನ್ನಡಕ್ಕೆ ಕಾಲಿಟ್ಟಿಟು. ಬಂಕಿಮರ ದುಗರ್ೇಶ ನಂದಿನಿ ಯನ್ನು 1885ರಲ್ಲಿ ವೆಂಕಟಾಚಾರ್ಯರು ಕನ್ನಡಕ್ಕೆ ಅನುವಾದಿಸಿದರು. 1896 ರಲ್ಲಿ ಗುಬ್ಬಿಯ ಮುರುಗಾರಾಧ್ಯರ ಸ್ವತಂತ್ರ ಕೃತಿ 'ಶೃಂಗಾರ ಚಾತುಯರ್ೊಲ್ಲಾಸಿನಿ' ಪ್ರಕಟವಾಯಿತು. 1899ರಲ್ಲಿ ಗುಲ್ವಾಡಿ ವೆಂಕಟರಾಯರ 'ಇಂದಿರಾ' ಕನ್ನಡದಲ್ಲಿ ಮೊದಲನೆಯ ಸ್ವತಂತ್ರ ಸಾಮಾಜಿಕ ಕಾದಂಬರಿಯಾಗಿ ಹೊರಬಂದಿತು. 1905 ರಲ್ಲಿ ಬಾಬುರಾಯರು 'ವಾಗ್ದೇವಿ' ಎಂಬ ಕಾದಂಬರಿಯನ್ನು ಹೊರತಂದರು. ಕನ್ನಡದಲ್ಲಿ ಸಾಹಿತ್ಯ ವಿಮಶರ್ೆ ಬೆಳೆದದ್ದು ನವೋದಯದ ಕಾಲದಲ್ಲಿಯೇ ಎನ್ನಬಹುದು. 1895 ರಲ್ಲಿ ರನ್ನನ ಜೀವನ ಚರಿತ್ರೆಯ ಜೊತೆಗೆ ಅವನ ಕೃತಿಗಲ ಪರಿಚಯಾತ್ಮಕ ವಿಮಶರ್ೆಯನ್ನು 'ರಾಮಾನುಜ ಅಯ್ಯಂಗಾರ್' ರವರು ಮಾಡಿದರು ಎನ್ನಲಾಗಿದೆ. ಹಾಗಾಗಿ ಕನ್ನಡ ವಿಮಶರ್ೆಯ ಉಗಮ ಹತ್ತೊಂಬತ್ತನೆ ಶತಮಾನದ ಕೊನೆಯಲ್ಲಿಯೇ ಎನ್ನಬಹುದು.

**ನವೋದಯ ಸಾಹಿತ್ಯ ಚಳುವಳಿ :**

ಇದರ ಸ್ಥಾಪಕರು ಬಿ.ಎಂ.ಶ್ರೀಕಂಠಯ್ಯ. ಕ್ರಿ.ಶ. ಸುಮಾರು 1920-50ರ ಕಾಲದ ವ್ಯಾಪ್ತಿಯಿರುವ ಈ ಕಾಲವು ಬಿಎಂಶ್ರೀಯವರು ಬರೆದ 'ಇಂಗ್ಲೀಷ್ ಗೀತೆಗಳು' ಕೃತಿಯ ಮೂಲಕ ನವೋದಯ ಸಾಹಿತ್ಯ ಆರಂಭವಾಯಿತು. ಇದಕ್ಕೆ ಮೂಲಪ್ರೇರಣೆ ಇಂಗ್ಲೀಷ್ನ ರೋಮ್ಯಾಂಟಿಸಂ. ಈ ಸಂದರ್ಭದಲ್ಲಿ ಭಾವಗೀತೆಯೇ ಪ್ರಮುಖ ಸಾಹಿತ್ಯ ಪ್ರಕಾರವಾಗಿ ಹೊರಹೊಮ್ಮಿತು. ಈ ಕಾಲದಲ್ಲಿ ಸರಳವಾದ ಆಡುಮಾತಿನ ಶೈಲಿಯೇ ಪ್ರಧಾನವಾಗಿದ್ದರೂ ಭಾಷೆ ಸಂಸ್ಕೃತಭೂಯಿಷ್ಟವಾಗಿತ್ತು. ಈ ಸಾಹಿತ್ಯ ಪಂಥದ ಮೂಲ ತತ್ವಗಳೆಂದರೆ, ಆದರ್ಶ ಜೀವನ, ಪ್ರೀತಿ, ಭ್ರಮಾತ್ಮಕತೆ, ನಿಸರ್ಗಪ್ರಿಯತೆ, ದೇಶೀಯ ಮೂಲ ಸಂಸ್ಕೃತಿ ಮುಂತಾದವುಗಳು. ನವೋದಯ ಸಾಹಿತ್ಯ ಕಾಲವು

ಭ್ರಮಾತ್ಮಕತೆಗೆ, ಕನಸುಗಾರಿಕೆಯಲ್ಲಿ ಸದಾ ತೇಲುವಿಕೆ, ವಾಸ್ತವಕ್ಕಿಂತ ಅವಾಸ್ತವದ ಹೆಚ್ಚುಗಾರಿಕೆ, ಸೌಂದಯರ್ೋಪಾಸನೆ, ರಸಾಬಿ???ತೆಯ ಅತಿಯಾದ ವರ್ಣನೆಯಿಂದಾಗಿ ಅತಿ ಹೆಚ್ಚು ವಿಮಶರ್ೆಗೊಳಗಾಯಿತು. ಬಿಎಂಶ್ರೀ, ತೀನಂಶ್ರೀ, ಬೇಂದ್ರೆ, ಕಾರಂತ, ಮಾಸ್ತಿ, ಕುವೆಂಪು, ಜಿ.ಎಸ್.ಎಸ್., ಕೆ.ಎಸ್.ನರಸಿಂಹಸ್ವಾಮಿ, ಶಾಂತಕವಿ, ಗಳಗನಾಥ, ಮೊದಲಾದವರು ಈ ಕಾಲದ ಪ್ರಮುಖ ಕವಿಗಳು.

**ಪ್ರಗತಿಶೀಲ :**

ಇದರ ಸ್ಥಾಪಕರು ಅ.ನ.ಕೃಷ್ಣರಾಯರು. ಕ್ರಿ.ಶ. ಸುಮಾರು 1943-48 ರ ವರೆಗಿನ ಕಾಲ ಈ ಪಂಥದ ವ್ಯಾಪ್ತಿ ಹರಡಿತ್ತು. ಅ.ನ.ಕೃರವರು ಬರೆದ ಕೃತಿಯ ಮೂಲಕ ಆರಂಭವಾದ ಈ ಪಂಥಕ್ಕೆ ಮೂಲ ಪ್ರೇರಣೆಯೆಂದರೆ, ರಷ್ಯಾದ ಮಾರ್ಕ್ಸವಾದ. ಕಾದಂಬರಿ ಈ ಸಾಹಿತ್ಯ ಪಂಥದ ಪ್ರಮುಖ ಸಾಹಿತ್ಯ ಪ್ರಕಾರ. ಆಡುಮಾತಿನ ಶೈಲಿಯನ್ನೇ ಸಾಹಿತ್ಯದಲ್ಲಿ ಬಳಸಿಕೊಂಡ ಈ ಪಂಥವು ದುರ್ಬಲರ ಪರವಾದ ಸ್ವಾಂತಂತ್ರ್ಯ ಆಕಾಂಕ್ಷೆ, ಸಮತಾವಾದ, ನಿರ್ಭಯ ವಿಮಶರ್ೆ, ಹಾಸ್ಯದ ದಬ್ಬಾಳಿಕೆ, ಬಂಧನ ವಿರೋಧ, ವಾಸ್ತವ ಜಗತ್ತಿನ ನೈಜ ಚಿತ್ತಣ ಮೊದಲಾದವುಗಳನ್ನೇ ಮೂಲ ತತ್ವವನ್ನಾಗಿಸಿಕೊಂಡಿತು. ಸಮಾಜವಾದ ಒಂದೇ ವರ್ಗವನ್ನು ಅತಿಯಾದ ಉಗ್ರವಾದದೊಂದಿಗೆ ವಿಮಶರ್ಿಸಿತು. ರಷ್ಯಾದ್ದು ಶ್ರೇಷ್ಠ, ವಿದೇಶೀ ಶೈಲಿಯ ಧೋರಣೆ, ಕಮ್ಯುನಿಷ್ಟ್ವಾದ ಮೊದಲಾದವುಗಳು ಈ ಕಾಲದ ಪ್ರಮುಖ ದೌರ್ಬಲ್ಯಗಳಾಗಿದ್ದವು. ಅನಕೃ, ನಿರಂಜನ, ಚದುರಂಗ, ತರಾಸು, ಬಸವರಾಜು ಕಟ್ಟೀಮನಿ, ಕುಮಾರ ವೆಂಕಣ್ಣ ಮೊದಲಾದವರು ಪ್ರಗತಿಶೀಲ ಪಂಥದ ಪ್ರಮುಖ ಸಾಹಿತಿಗಳು.

**ನವ್ಯ ಸಾಹಿತ್ಯ ಚಳುವಳಿ :**

ಇದರ ಸ್ಥಾಪಕರು ಗೋಪಾಲಕೃಷ್ಣ ಅಡಿಗರು ಹಾಗೂ ಮಾಸ್ತಿ ವೆಂಕಟೇಶ್ ಅಯ್ಯಂಗಾರ್. 1948-1970ರ ವರೆಗಿನ ಕಾಲದವರೆಗೆ ಈ ಚಳುವಳಿಯ ವ್ಯಾಪ್ತಿ ಹಬ್ಬಿದೆ. ವಿನಾಯಕರ 'ಸಮುದ್ರಗೀತೆ' ಕವನದ ಮೂಲಕ ಆರಂಭವಾದ ಈ ಚಳುವಳಿಗೆ ಮೂಲ ಪ್ರೇರಣೆಯೆಂದರೆ, ಇಂಗ್ಲಿಷ್ ಮಾಡನರ್್ ಪೊಯೆಟ್ರಿ ಕಾದಂಬರಿ ಮತ್ತು ಸಣ್ಣಕತೆಗಳು ಈ ಸಾಹಿತ್ಯ ಪಂಥದ ಪ್ರಮುಖ ಸಾಹಿತ್ಯ ಪ್ರಕಾರಗಳಾಗಿವೆ. ಮಧ್ಯಮ ವರ್ಗಗಳ ಆಡುಭಾಷೆಯೊಂದಿಗೆ ನಿಕಟವಾದ ಶೈಲಿಯ ಭಾಷೆಯನ್ನೇ ಈ ಅವಧಿಯಲ್ಲಿ ಬಳಸಲಾಯಿತು. ಅಸ್ತಿತ್ವವಾದ, ಸಮಕಾಲೀನ ಸಮ್ಮಜದ , ಸಮನ್ವಯವಾದಿ ಧೋರಣೆ, ಪ್ರತಿಮಾನಿಷ್ಠ, ಸಂಕೇತನಿಷ್ಠ ಮಾನಸಿಕ ತಾಕಲಾಟ ಮೊದಲಾದವುಗಳು ನವ್ಯ ಸಾಹಿತ್ಯದ ಪಂಥದ ಮೂಲತತ್ವಗಳಾಗಿದ್ದವು. ಕೆಳವರ್ಗದವರ ಬದಲಿಗೆ ಮಧ್ಯಮವರ್ಗದ ಸಾಹಿತ್ಯವಾಗಿ ಬದಲಾವಣೆ, ಭಾಷೆಯ ವಸ್ತು-ಧೋರಣೆ, ಮಧ್ಯಮ ಮಾರ್ಗದಲ್ಲಿ ಬಲಕೆಯಾದುದು ಇವೆಲ್ಲವೂ ಈ ಪಂಥದ ಪ್ರಮುಖ ದೌರ್ಬಲ್ಯಗಳಾಗಿವೆ. ಈ ಕಾಲದ ಪ್ರಮುಖ ಸಾಹಿತಿಗಳೆಂದರೆ, ಅಡಿಗ, ಗೋಕಾಕ್, ರಾಮಾನುಜಂ, ಲಂಕೇಶ್, ತೇಜಸ್ವಿ, ಅನಂತಮೂತರ್ಿ, ಯಶವಂತ ಚಿತ್ತಾಲ, ಶಾಂತಿನಾಥ ದೇಸಾಯಿ, ಕಂಬಾರ, ಜಿ.ಎಚ್.ನಾಯಕ್ ಮೊದಲಾದವರು.

**ದಲಿತ ಬಂಡಾಯ ಚಳುವಳಿ :**

ಸಿದ್ಧಲಿಂಗಯ್ಯನವರು ಈ ಪಂಥದ ಸ್ಥಾಪಕರು. ಸುಮಾರು 1970 ರ ನಂತರದ ಕಾಲವನ್ನು ಈ ಚಳುವಳಿ ವ್ಯಾಪಿಸಿದೆ. ಸಿದ್ಧಲಿಂಗಯ್ಯನವರ ಹೊಲೆಮಾದಿಗಾ ಹಾಡು ಎಂಬ ಕೃತಿಯೊಂದಿಗೆ ಆರಂಭಗೊಂಡ ಈ ಪಂಥಕ್ಕೆ ಮೂಲ ಪ್ರೇರಣೆ ದೇಶೀಯ ಅಂಬೇಡ್ಕರ್ ಲೋಹಿಯಾ ವಾದ. ಸಣ್ಣಕಥೆ ಕಾದಂಬರಿ ಈ ಕಾಲದ ಪ್ರಮುಖ ಸಾಹಿತ್ಯ ಪ್ರಕಾರಗಳು. ಗ್ರಾಮೀಣ ಪ್ರಾದೇಶಿಕ ಮೂಲ ದೇಶೀಯ ಗ್ರಾಮ್ಯಭಾಷೆಯನ್ನೇ ತಮ್ಮ ಕೃತಿಯ ಭಾಷೆಯನ್ನಾಗಿ ಈ ಕಾಲದಲ್ಲಿ ಅಳವಡಿಸಿ ಕೊಳ್ಳಲಾಯಿತು. ದೀನದುರ್ಬಲರ ಜೀವನದ ಹಸಿ ಚಿತ್ರಣ, ದುರ್ಬಲ ಮಹಿಳಾಪರ ವಾದಗಳು ದಲಿತ ಬಂಡಾಯ ಸಾಹಿತ್ಯದ ಮೂಲ ತತ್ವಗಳಾಗಿವೆ. ಒಂದೇ ರೂಪದ ವಸ್ತು, ಭಾಷೆ, ಧೋರಣೆ, ಏಕತಾನತೆ, ಹೊಸ ರೂಪದ ರಚನೆಯ ಕೊರತೆ, ಹಾಗೂ ರೂಪಪರಿವರ್ತನೆ ಮುಂತಾದವುಗಳು ಈ ಪಂಥದ ಪ್ರಮುಖ ದೌರ್ಬಲ್ಯಗಳು. ಸಿದ್ದಲಿಂಗಯ್ಯ, ಬರಗೂರು, ಕಾಳೇಗೌಡ ನಾಗವಾರ, ಚಂಪಾ, ಚೆನ್ನಣ್ಣವಾಲೀಕಾರ್, ಸಾರಾ ಅಬುಬಕರ್, ಬಾಸು ಮುಷ್ಕರ್, ಪುರುಷೋತ್ತಮ ಬಿಳಿಮಲೆ, ರಂಜಾನ್ ದಗರ್ಾ, ಜಂಬಣ್ಣ ಅಮರಚಿಂತ, ಬಸವರಾಜ್ ಸಬರದ, ಎಲ್.ಹನುಮಂತಯ್ಯ, ಗವಿಸಿದ್ಧ ಬಳ್ಳಾರಿ, ಅಲ್ಲಮಪ್ರಭು ಬೆಟದೂರು, ಸರಜೂಕಾಟಕರ್, ಸತೀಶ್ ಕುಲಕಣರ್ಿ, ಸತ್ಯಾನಂದ ಪಾತ್ರೊಟಿ, ಜಿ.ಎಸ್.ರಾಘವೇಂದ್ರ, ಅಶೋಕ ಶೆಟ್ಟರ್, ಬಂಜಗೆರೆ ಜಯಪ್ರಕಾಶ್, ಚಂದ್ರಶೇಖರ್ ತಾಳ್ಯ, ಶಶಿಕಲಾ ನೀರಯ್ಯ ಸ್ವಾಮಿ, ಮಲ್ಲಿಕಾ ಘಂಟಿ ಮೊದಲಾದವರು ದಲಿತ ಬಂಡಾಯ ಚಳುವಳಿಯ ಪ್ರಮುಖ ಸಾಹಿತಿಗಳು.

**-: ಕನ್ನಡಸಾಹಿತ್ಯದಲ್ಲಿ ಬಂದಂತಹ ಹೊಸ ಪ್ರಕಾರಗಳು :-**

ನಮ್ಮ ಕನ್ನಡ ಸಾಹಿತ್ಯದಲ್ಲಿದ್ದಂತಹ ಕಾವ್ಯದ ವಿವಿಧ ಪ್ರಕಾರಗಳ ಜೊತೆಗೆ ಹೊಸ ಸ್ವರೂಪದ ಸಾಹಿತ್ಯ ಪ್ರಕಾರಗಳು ಆ ಕಾಲಕ್ಕೆ ಕನ್ನಡಕ್ಕೆ ಬಂದವು. ಇಂತಹ ಹೊಸ ಸ್ವರೂಪದ ಪ್ರಕಾರಗಳು ಜೀವನದ ನೆಲಗಟ್ಟನ್ನೇ ಬದಲಾಯಿಸಿದವು.

**ಭಾವಗೀತೆ :** ಇದು ಭಾವ ಮತ್ತು ಗೀತೆ ಎರಡೂ ಇರುವಂತಹದ್ದಾಗಿದೆ. ಇಂಗ್ಲೀಷಿನಲ್ಲಿ ಐಥಿಡಿಜ ಎಂಬುದಕ್ಕೆ

ಸಂವಾದಿಯಾದಂತಹ ಪದವಿದು. ಕವಿಯ ವಯಕ್ತಿಕ ಭಾವನೆಗಳನ್ನು ಅಭಿವ್ಯಕ್ತಿಪಡಿಸುವಂತಹ ಕಿರುಗಮನ ಇದಾಗಿದೆ. ಒಂದರ್ಥದಲ್ಲಿ ಭಾವಗೀತೆ ನಿಜವಾದ ಅನುಭವದ ನಂಬಿಕೆಯನ್ನು ಮೂಡಿಸಿ ಅಂತರಂಗವನ್ನು ಕೆಣಕಬಲ್ಲ ಸಾಹಿತ್ಯ ಪ್ರಕಾರವಾಗಿದೆ. ಅಂಬಿಕಾತನಯದತ್ತ ಕುವೆಂಪುರವರು ಮುಖ್ಯ ಭಾವಗೀತ ಕವಿಗಳಾಗಿ ಮೂಡಿ ಬಂದರು. ಈ ಹಾದಿಯ ಹಲವು ಪ್ರಯೋಗಗಳನ್ನು ಜಿ. ಎಸ್. ಶಿವರುದ್ರಪ್ಪ, ಚೆನ್ನವೀರ ಕಣವಿ, ಕೆ.ಎಸ್. ನರಸಿಂಹಸ್ವಾಮಿಯವರು ಪರಿಣಾಮ ಕಾರಿಯಾಗಿ ಮಾಡಿದರು.

**ಶೋಕಗೀತೆ :** ನವೋದಯ ಸಾಹಿತ್ಯದ ಸಂದರ್ಭದಲ್ಲಿನ ಭಾವಗೀತೆಯ ಪ್ರಕಾರಗಳಲ್ಲಿ ಎಲಿಜಿ ಅಥವಾ ಶೋಕಗೀತೆ ಮೊದಲನೆಯದು. ಇಂಗ್ಲೀಷ್ ಸಾಹಿತ್ಯದ ಮೂಲಕ ಕನ್ನಡದಲ್ಲಿ ಅವತರಿಸಿದ ನೂತನ ಸಾಹಿತ್ಯ ಪ್ರಕಾರಗಳಲ್ಲಿ ಪ್ರಮುಖವಾದುದಾಗಿದೆ. ಇಂದು ಇದು ನಮ್ಮಲ್ಲಿ ಶೋಕಗೀತೆ ಎಂಬರ್ಥದಲ್ಲಿ ಬಳಕೆಗೊಳ್ಳುತ್ತಿದ್ದರೂ ಸಹ ಗ್ರೀಕರಲ್ಲಿ ವಿಶೇಷವಾಗಿ ಬಳಕೆಯಲ್ಲಿದ್ದ ಇದಕ್ಕೆ ಈ ಅರ್ಥವಿರಲಿಲ್ಲವೆಂದು ಹೇಳಲಾಗಿದೆ. ಕೆಲವರು ಮೃತರ ಸಮಾಧಿ ಕ್ರಿಯೆಯ ಸಂದರ್ಭದಲ್ಲಿ ಸಂಗೀತದೊಂದಿಗೆ ಉಪಯೋಗಿಸುತ್ತಿದ್ದ ಮಂತ್ರದಂತಹ ಗುಂಪು ಎಂದು ಅಭಿಪ್ರಾಯಿಸಿದರೂ ಸಹ ವಿದ್ವಾಂಸರು ಈ ಅಭಿಪ್ರಾಯಕ್ಕೆ ಮನ್ನಣೆ ಕೊಡಲಿಲ್ಲ. ಬರಬರುತ್ತಾ ಲಘುವಾದುದರಿಂದ ಹಿಡಿದು ಗಂಭೀರವಾದುದರವರೆಗೆ ಎಲ್ಲ ಬಗೆಯ ಭಾವನೆಗಳೂ ಇದರಲ್ಲಿ ಸೇರತೊಡಗಿದವು. ಅತ್ಯಂತ ಪ್ರಿಯವಾದ ವ್ಯಕ್ತಿ ತೀರಿಕೊಂಡಾಗ ಅವನನ್ನು ಕುರಿತು ಬರೆಯುವ ಕವನವನ್ನು ಎಲಿಜಿ ಅಥವಾ ಶೋಕಗೀಗೆ ಎಂದು ನಾವು ಕರೆಯಬಹುದು.

**ಮುಕ್ತಕಗಳು :** ನಾಲ್ಕರು ಸಾಲುಗಳಲ್ಲಿ ಸುಂದರವಾದ ಭಾವ ಪ್ರಪಂಚವೊಂದನ್ನು ಸೃಷ್ಟಿಸಬಲ್ಲ ಕವನ ರೂಪವೇ ಮುಕ್ತಕ. ಪ್ರಮುಖವಾಗಿ ಪ್ರಣಯ, ಅದಿಲ್ಲದ ಸಮಯಗಳಲ್ಲಿ ಹಾಸ್ಯ, ವಿಡಂಬನೆ, ಇವುಗಳ ಅದರ ವಸ್ತು. ಸಂಸ್ಕೃತ ಸಾಹಿತ್ಯ ಮುಕ್ತಕಗಲನ್ನು ಗಣನೀಯವಾದ ಪ್ರಮಾಣದಲ್ಲಿ ನೀಡಿದೆ. ಅದನ್ನು ಶ್ರೀಮಂತಗೊಳಿಸಿದ ಕವಿಗಳಲ್ಲಿ ಪ್ರಮುಖನಾದವನೆಂದರೆ ಅಮರುಕ. ವಿಶೇಷವಾಗಿ ಕನ್ನಡ ಜನಪದ ಸಾಹಿತ್ಯದಲ್ಲಿ ಅಲ್ಲಲ್ಲಿ ಸೃಷ್ಟಿಯಾಗಿರುವ ಈ ಕವನ ರೂಪ ಆಧುನಿಕ ಕನ್ನಡ ಕವಿಗಳಿಂದ ಅಷ್ಟಾಗಿ ಪೋಷಣೆ ಪಡೆದಿಲ್ಲವಾದರೂ ಸಂಪೂರ್ಣವಾಗಿ ಉಪೇಕ್ಷಿತವಾಗಿಲ್ಲ.

**ಕಥನ - ಕವನ :** ಇಂಗ್ಲೀಷಿನ ಬ್ಯಾಲಡ್ ಪದಕ್ಕೆ ಸಂವಾದಿಯಾದಂತಹ ಪದವಿದುರಾಗಕ್ಕೆ ಹೊಂದುವ ಪದಗಳ ಜೋಡಣೆ ಎನ್ನುವ ಅರ್ಥವನ್ನು ಇದು ಹೊಂದಿದೆ. ಒಂದು ವಸ್ತುವನ್ನು ತೆಗೆದುಕೊಂಡು ಆ ವಸ್ತುವಿನ ಕಥೆಯನ್ನು ಕವನ ರೂಪದಲ್ಲಿ ಸುಂದರವಾಗಿ ಮೂಡಿಸುವುದೇ ಕಥನ ಕವನ. ಮಾಸ್ತಿಯವರ ನವರಾತ್ರಿ, ಕುವೆಂಪುರವರ ಬೊಮ್ಮನಹಳ್ಳಿಯ ಕಿಂದರಜೋಗಿ, ನಾಗಿ, ಮುಂತಾದವುಗಳು ಕಥನ ಕವನಗಳಿಗೆ ಉತ್ತಮ ಉದಾಹರಣೆ.

**ಸಣ್ಣ ಕತೆಗಳು :** ಲಲಿತಕಲೆಗಳ ಇನ್ನೊಂದು ಮುಖವೇ ಸಣ್ಣ ಕತೆಗಳು. ಲಲಿತಕಲೆ ಯಾದರೋಸಾಹಿತ್ಯದಲ್ಲಿ ವಿಶೇಷ ಶಕ್ತಿಯುಳ್ಳದ್ದು ಬಹುಕಾಲಬಾಳುವಂಥದ್ದು. ಮಾನವನ ಜೀವನಕ್ಕೆ ಉಪಯುಕ್ತವಾದುದು ಲಲಿತಸಾಹಿತ್ಯವು ಭಾವಾತ್ಮಕವಾಗಿ ಹೃದಯಸ್ಪಶರ್ಿಯಾಗುವುದು ಇದು, ರಮಣೀಯವಾದುದು, ಆನಂದ ದಾಯಕವಾದುದು ಸತ್ಯವಾದುದು ಮತ್ತು ಸುಖಕರವಾದುದು. ಈ ಲಲಿತ ಸಾಹಿತ್ಯದಲ್ಲಿ ಕತೆ ಕಾದಂಬರಿ, ನಾಟಕ, ಪ್ರಬಂಧ, ಹರಟೆ ಮುಂತಾದ ರೂಪಕಗಳು ಬೆಳೆದುಬಂದಿದೆ. ಕಥೆಯ ಮುಖ್ಯ ಲಕ್ಷಣ ಕಥನ ಮತ್ತು ಕಥನ ಕೌಶಲ ಭಾವಭಂಗವಾಗದಂತೆ ಪೂತರ್ಿಯಾಗಬೇಕು. ಸಂಪ್ರದಾಯ ಯಾವುದಾದರೂ ಆಗಬಹುದು.

**ಸಂಶೋಧನೆ :** ನಮ್ಮ ತಿಳಿವಳಿಕೆಯು ವಿಸ್ತಾರಗೊಳ್ಳಲು ತುಂಬಾ ಸಹಕಾರಿಯಾದ ಅಧ್ಯಯನ ಕ್ರಮ ಸಂಶೋಧನೆ. ಈ ಹೇಳಿಕೆಯು ವಿನ, ಸಾಹಿತ್ಯ, ಕಲೆ, ಮತ್ತಿತರ ಎಲ್ಲಾ ರಂಗಗಳಿಗೂ ಅನ್ವಯಿಸುತ್ತದೆ. ನಮ್ಮ ಹಿಂದಿನ ಪೀಳಿಗೆಯ ಜನರು ತಮ್ಮ ಕಾಲದಲ್ಲಿ ಹಲವು ಕ್ಷೇತ್ರಗಳಲ್ಲಿ ಅನೇಕ ಸಾಧನೆಗಳನ್ನು ಮೈಗೂಡಿಸಿಕೊಂಡಿರುತ್ತಾರೆ. ಅವುಗಳನ್ನು ಕುರಿತ ವಿವರಗಳು, ಸಾಧನೆಗಳು ನಾನಾ ಕಾರಣಗಳಿಂದ ನಮ್ಮ ಕಣ್ಣಿಗೆ ಬೀಳದೆ ನಿಗೂಢವಾಗಿರುತ್ತವೆ. ಇಂಥವುಗಳನ್ನು ಹುಡುಕಿ ತೆಗೆದು, ಅವುಗಳನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಿ ಅವುಗಳ ಬಗ್ಗೆ ತಿಳಿವಳಿಕೆ ಪಡೆಯುವುದೇ ಸಂಶೋಧನೆಯ ಪ್ರಧಾನ ಉದ್ದೇಶ.

**ಓಡ್ ಅಥವಾ ಪ್ರಗಾಥ :** ಇಂಗ್ಲೀಷ್ನ ಮೂಲಕ ಕನ್ನಡ ಸಾಹಿತ್ಯ ಪ್ರವೇಶಿಸಿದ ಮತ್ತೊಂದು ಪ್ರಮುಖ ಸಾಹಿತ್ಯ ಪ್ರಕಾರವಿದು. ಪ್ರಗಾಥಕ್ಕೆ ಇಂಗ್ಲೀಷ್ನಲ್ಲಿ 'ಠಜಜ' ಎಂಬ ಹೆಸರು ರೂಢವಾಗಿದೆ. ಪ್ರಗಾಥವು ಭಾವಗೀತೆಯ ಒಂದು ಪ್ರಕಾರ. ಗಂಭೀರವಾದ ಶೈಲಿಯಲ್ಲಿ ರಚಿತವಾದ ಪ್ರಶಂಸನಾ ರೂಪವಾದ ಭಾವಗೀತದು. ಸಾಮಾನ್ಯವಾಗಿ ಇದು ಸಂಬೋಧನಾ ಪರವಾಗಿಯೋ, ಧ್ಯಾನ ಪ್ರಧಾನವಾಗಿಯೋ ಇರುವ ಒಂದು ಕವಿತೆ. ಅದು ಕಟ್ಟುನಿಟ್ಟಾದ ಚರನಗಳನ್ನೊಳಗೊಂಡ ಪದ್ಯಗಳ ಮಾಲೆಯಾಗಿರದೇ ವಿವಿಧ ಪ್ರಾಸವಿನ್ಯಾಸದಿಂದ ಕೂಡಿದ ಅನಿಯಮಿತ ಚರನಗಳು ಸೇರಿದ ಪದಗಳು ಸಂಕೀರ್ಣವಾಗಿರುವುದೇ ಹೆಚ್ಚು. ನಿಯಮಿತ ಸಂಖ್ಯೆಯ ಚರಣಗಳ ಪದ್ಯಗಳನ್ನು ನಿಯತವಾದ ಕ್ರಮದಲ್ಲಿ ಒಳಗೊಂಡ ಪ್ರಗಾಥದ ಪ್ರಬೇಧಕ್ಕೆ ಪಿಂಡಾರಿಕ್ ಪ್ರಗಾಥ ಎಂದು ಹೆಸರು.

**ಮಹಾಕಾವ್ಯ ;** ಪದ್ಯ ಕಾವ್ಯಗಳಲ್ಲೆಲ್ಲಾ ಪ್ರಸಿದ್ಧವಾದುದು ಮಹಾಕಾವ್ಯ. ಇದು ಹದಿನೆಂಟು ವರ್ಣನೆಗಳು, ನವರಸಗಳು ಮತ್ತು ಆಶ್ವಾಸ, ಸಂಧಿ, ಸರ್ಗ, ಕಾಂಡ ಇತ್ಯಾದಿ ವಿಭಾಗಗಳನ್ನೊಳ ಗೊಂಡಿರುತ್ತದೆ. ವೃತ್ತ ಇಲ್ಲವೆ ಇತರೆ ಛಂದಸ್ಸಿನಿಂದ ಕೂಡಿರುವ ಲಕ್ಷಣಗಳು ಪ್ರಾಚೀನ ಕನ್ನಡ ಮಹಾಕಾವ್ಯಗಳ ಲಕ್ಷಣಗಳು. ಆದರೆ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ 'ಮಹಾಕಾವ್ಯ' ಹೊಸರೂಪ

ಪಡೆದುಬಂದಿತು. ಕುವೆಂಪುರವರ 'ಶ್ರೀ ರಾಮಾಯಣ ದರ್ಶನಂ', ಮಾಸ್ತಿಯವರ 'ಶ್ರೀ ರಾಮ ಪಟ್ಟಾಭಿಷೇಕ', ವಿ,ಕೃ,ಗೋಕಾಕರ 'ಭರತ ಸಿಂಧು ರಶ್ಮಿ', ಪುತಿನರವರ 'ಶ್ರೀ ಹರಿಚರಿತೆ', ಭೂಸನೂರಮಠರ 'ಭವ್ಯಮಾನವ' ಇತ್ತೀಚಿನ ವೀರಪ್ಪ ಮೊಯಿಲಿಯವರ 'ಶ್ರೀ ರಾಮಾಯಣ ಮಹಾನ್ವೇಷಣಂ' ಕೃತಿಯವರೆಗೂ ಕನ್ನಡ ಮಹಾಕಾವ್ಯ ಪರಂಪರೆ ಆಧುನಿಕ ಕಾಲದಲ್ಲಿ ಹೊಸರೂಪ ಪಡೆಯುತ್ತಲೇ ಇದೆ.

**ಸೀಸಪದ್ಯ :** ಇದು ಶುದ್ಧ ದ್ರಾವಿಡ ಛಂದಸ್ಸು. ಒಟ್ಟು ಹನ್ನೆರಡು ಪಂಕ್ತಿಗಳ ಒಂದು ಸಾಹಿತ್ಯ ಪ್ರಕಾರ. ಕವನಗಳ ವಸ್ತುವಿನಲ್ಲಿ ವೈವಿಧ್ಯವಿದ್ದರೂ ಆಲೋಚನಾ ಪ್ರಧಾನವಾದ ಕವನಗಳೇ ಹೆಚ್ಚು. ಸಾನೆಟ್ಟಿನಂತೆ ಇಲ್ಲಿಯೂ ಭಾವೈಕ್ಯತೆಗೆ ಹೆಚ್ಚಿನ ಅವಕಾಶವಿದೆ. ಕನ್ನಡದಲ್ಲಿ ಸೀಸಪದ್ಯಗಳನ್ನು ರಚಿಸಿದವರೆಂದರೆ. ಡಿವಿಜಿ ಮತ್ತು ಬೇಂದ್ರೆಯವರು. 'ನಿವೇದನ', 'ಬೇಲೂರಿನ ಶಿಲಾಬಾಲಿಕೆಯರು' ಸೀಸಪದ್ಯಕ್ಕೆ ಉದಾಹರಣೆಗಳಾಗಿವೆ.

**ನಾಟಕ :** ಇಂಗ್ಲೀಷಿನ 'ಡ್ರಾಮಾ' ದ ಪ್ರಭಾವದಿಂದ ಆಧುನಿಕ ಕಾಲದಲ್ಲಿ 'ನಾಟಕ'ವು ಸಮೃದ್ಧವಾಗಿ ಬೆಳೆದಿದೆ. ಸಾಮಾಜಿಕ, ಜಾನಪದ, ಪೌರಾಣಿಕ, ಅಸಂಗತ ವಸ್ತುವನ್ನುಳ್ಳ ನಾಟಕಗಳು ದಿನೇ ದಿನೇ ರಚನೆ ಮತ್ತು ಪ್ರದರ್ಶನಗಳಾಗುತ್ತಲೇ ಇವೆ. ಪರಂಪರೆ, ಇತಿಹಾಸ, ರಾಜಕಾರಣಗಳ ಜೊತೆಗೆ ಜೀವಂತ ಸಂವಾದವನ್ನು ನಾಟಕ ಪ್ರಕಾರವು ಮೊದಲಿನಿಂದಲೂ ತನ್ನ ಮುಖ್ಯ ಧಾತುವನ್ನಾಗಿ ಮಾಡಿಕೊಂಡಿದೆ. ಸಂಸ, ಶ್ರೀರಂಗ, ಕೈಲಾಸಂ ಇವರುಗಳ ಹೆಸರುಗಳು ಈ ದೃಷ್ಟಿಯಿಂದ ಬಹಳ ಮುಖ್ಯವಾದುದಾಗಿದೆ. ಲಂಕೇಶರು ವಸ್ತುವಿನ ಆಯ್ಕೆಯಲ್ಲಿ ಹಾಗು ಭಾಷಾ ಬಳಕೆಯಲ್ಲಿ ವೈವಿಧ್ಯತೆಯನ್ನು ಸಾಧಿಸಿದರು. ನಾಟಕದ ವಸ್ತುವಿನಲ್ಲಿ ವಾಸ್ತವತೆಯನ್ನು ಮೀರಿದ ಜಾನಪದ ಪ್ರಪಂಚದ ರೂಪಕವನ್ನು ಸೃಷ್ಟಿಸುವಲ್ಲಿ ಕಂಬಾರರು ಯಶಸ್ಸನ್ನೂ ಪಡೆದರು.

**ಕಾದಂಬರಿ ;** ಇಂಗ್ಲೀಷಿನ 'ನಾವೆಲ್' ಪದಕ್ಕೆ ಸಂವಾದಿಯಾದಂತಹ ಪದವಿದು. ಕಾದಂಬರಿಯನ್ನು 'ಕರತಲ ರಂಗಭೂಮಿ' ಎಂದು ಹೇಳುತ್ತಾರೆ. ಆಧುನಿಕ ಯುಗದ ಮಹಾಕಾವ್ಯಗಳೆಂದರೆ ಅವು ಕಾದಂಬರೆಗಳೇ ಎನ್ನುಅ ಮಾತು ಸತ್ಯವಾದುದು. ಬಂಗಾಳಿ ಕಾದಂಬರಿಗಳ ಅನುವದ ಹಾಗು ಗಳಗನಾಥ, ದೇವುಡು ಇವರಿಂದ ಪ್ರಾರಮ್ಭವಾದ ಕನ್ನಡ ಕಾದಂಬರಿಗಳಿಗೆ ಪ್ರಾದೇಶಿಕ ಸತ್ವ ಹಾಗು ಬಹುಮುಖೀ ಸೃಜನ ಶೀಲತೆಯನ್ನು ತಂದು ಕೊಟ್ಟವರು ಶಿವರಾಮ ಕಾರಂತರು ಹಾಗು ಕುವೆಂಪುರವರು. ನಂತರ ಅರಕೃ, ಬಸವರಾಜ ಕಟ್ಟಿಮನಿ, ನಿರಂಜನ ಮುಂತಾದವರು ಸಾಮಾಜಿಕತೆಯ ಸ್ವರೂಪವನ್ನು ಕೊಟ್ಟು ಜನಪ್ರಿಯಗೊಳಿಸಿದರು.

ಇಷ್ಟೇ ಅಲ್ಲದೆ ಸಣ್ಣಕತೆ, ಲಲಿತ ಪ್ರಬಂಧಗಳು, ಕವಿಚರಿತೆ, ವಿಮಶರ್ೆ, ಸಂಶೋಧನೆ ಹೀಗೆ ಹತ್ತು ಹಲವು ಹೊಸರೂಪಗಳು ಕನ್ನಡಕ್ಕೆ ಕಾಲಿಟ್ಟವು ಇವುಗಳಿಂದಾಗಿ ಕನ್ನಡ ಸಾಹಿತ್ಯ ತನ್ನ ಹೊಸತನವನ್ನು ಸೃಷ್ಟಿಸಿಕೊಂಡಿತು.

**-: ಆಧಾರ ಗ್ರಂಥಗಳು :-**


- ❖ ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ - ಡಾ. ಚಿ.ಸಿ. ನಿಂಗಣ್ಣ.
- ❖ ಕನ್ನಡ ಸಾಹಿತ್ಯ ಕೋಶ - ರಾಜಪ್ಪ ದಳವಾಯಿ.
- ❖ ಕನ್ನಡ ಸಾಹಿತ್ಯ ಸಂಸ್ಕೃತಿ ಮೀಮಾಂಸೆ - ಡಾ. ಸಿ.ಬಿ. ಹೊನ್ನಯ್ಯ.
- ❖ ಕನ್ನಡ ಸಾಹಿತ್ಯ ಚರಿತ್ರೆಯ ಸಂಕ್ಷಿಪ್ತ ಪರಿಚಯ – ಮೈಸೂರು ಹಿಂದೀ ಪ್ರಚಾರ ಪರಿಷದ್.
- ❖ ಕನರ್ಾಟಕ ಸಂಗಾತಿ - ಕನ್ನಡ ಅಭಿವೃದ್ಧಿ ಪ್ರಾಧೀಕಾರ.


**************